

ಅನುಭವ

ತಿಂಗಳ ಪತ್ರಿಕೆ

ಗಣಿತ-ವಿಜ್ಞಾನಗಳ ಒಳನೋಟ

ಸಂಪುಟ: 09 ಸಂಚಿಕೆ: 09 ಏಪ್ರಿಲ್: 2023 ಪುಟ:12

ಖಾಸಗಿ ಪ್ರಸಾರಕ್ಕಾಗಿ ಮಾತ್ರ

> ಮನಸ್ಸು ಪರಿಶುದ್ಧವಾಗಿದ್ದರೆ ಸಂತೋಷ ನೆರಳಿನಂತೆ ನಮ್ಮನ್ನು ಹಿಂಬಾಲಿಸುತ್ತದೆ.
>
> – ಭಗವಾನ್ ಬುದ್ಧ

ಈ ಸಂಚಿಕೆಯಲ್ಲಿ

ಗೊಂದಲದ ಗೂಡಾಗಿರುವ ಶಿಕ್ಷಣ ಕ್ಷೇತ್ರ

– ಜಿ.ಎಸ್. ಜಯದೇವ, ದೀನಬಂಧು ಬಳಗ

ನಮ್ಮ ದೇಶದ ಶಿಕ್ಷಣ ಕ್ಷೇತ್ರ ಗೊಂದಲದ ಗೂಡಾಗಿದೆಯಲ್ಲ ಹೀಗೇಕೆ ಎನ್ನುವ ಪ್ರಶ್ನೆ ಸಾಮಾನ್ಯವಾಗಿ ಎಲ್ಲರನ್ನೂ ಕಾಡುತ್ತದೆ. ಡಾ. ಎ.ಆರ್.ವಾಸವಿಯವರು ಬರೆದಿರುವ **'Differentiation and Disjunction'** ಪುಸ್ತಕ ಓದುತ್ತಿದ್ದಂತೆ ಈ ಕುರಿತಾಗಿ ನಾನು ಹಿಂದೆ ಚರ್ಚಿಸಿದ, ಬರೆದ ಸಂಗತಿಗಳು ಮತ್ತೊಮ್ಮೆ ನನ್ನ ಕಣ್ಣ ಮುಂದೆ ಬಂದವು. ಯಾವೆಲ್ಲ ಸಮಸ್ಯೆಗಳಿಗೆ ಶಿಕ್ಷಣ ಪರಿಹಾರವಾಗಬೇಕಾಗಿತ್ತೋ ಆ ಸಮಸ್ಯೆಗಳನ್ನು ನಮ್ಮ ಇಂದಿನ ಶಿಕ್ಷಣ ಉಲ್ಬಣಗೊಳಿಸುತ್ತಿದೆಯೇ? ಉತ್ತರ – ಹೌದು. ನಮಗೆ ಅತಿಹೆಚ್ಚು ಜಿಗುಪ್ಸೆ ತರುವ ಸಮಸ್ಯೆಯಾದ ಭ್ರಷ್ಟಾಚಾರ ಶಿಕ್ಷಣ ಕ್ಷೇತ್ರದಲ್ಲಿ ತಾಂಡವವಾಡುತ್ತಿದೆ. ಬಲಶಾಲಿಗಳನ್ನು ಓಲೈಸುವ ಮತ್ತು ಬಡವರನ್ನು, ದುರ್ಬಲರನ್ನು ಅಂಚಿಗೆ ತಳ್ಳುವ ಅಧಿಕಾರಶಾಹಿಯ ಹೀನಗುಣಕ್ಕೆ ಈಗ ಹೆಚ್ಚುಹೆಚ್ಚು ಅವಕಾಶಗಳು ಒದಗಿ ಬರುತ್ತಿವೆ. ಉತ್ಕೃಷ್ಟವಾದದ್ದನ್ನು ಕಡೆಗಣಿಸಿ, ಸಾಧಾರಣ ಅಥವಾ ನಿಕೃಷ್ಟವಾದದ್ದನ್ನು ವೈಭವೀಕರಿಸುವ ಮೂಲಕ ತನ್ನದೇ ಕಳಪೆ ಗುಣಮಟ್ಟವನ್ನು ಮುಚ್ಚಿಕೊಳ್ಳುವ ವ್ಯವಸ್ಥಾಪಕರೆಲ್ಲರ ಸಂಘಟಿತ ಹುನ್ನಾರ ಕಣ್ಣಿಗೆ ರಾಚುತ್ತಿದೆ. ಈ ಎಲ್ಲ ಪಿಡುಗುಗಳೂ ನಮ್ಮ ಶಿಕ್ಷಣ ಕ್ಷೇತ್ರವನ್ನು ಗೆದ್ದಲಿನಂತೆ ಕಾಡುತ್ತಿವೆ. ನಮ್ಮ ಕೆಲವು ರಾಜಕೀಯ ನೇತಾರರೇ ಹೇಳುವಂತೆ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯನ್ನು ಕೋಟ್ಯಂತರ ರೂಪಾಯಿ ಲಂಚಕೊಟ್ಟು ಕೊಳ್ಳಬಹುದು. ಒಬ್ಬ ಪ್ರಾಧ್ಯಾಪಕನಂತೂ ಇಂತಹ ಹುದ್ದೆಗಾಗಿ ಮುಂಗಡ ಹಣಕೊಟ್ಟು, ಅನಂತರ ಹಣ ಪಡೆದವನು ತನ್ನನ್ನು ವಂಚಿಸಿದ ಎಂದು ದೂರು ನೀಡಲು ಹೋಗಿ ತಾನೇ ಸಿಕ್ಕಿಕೊಂಡ ಪ್ರಸಂಗದ ಸ್ವಾರಸ್ಯಕರ ವಿವರಗಳು ದಿನಪತ್ರಿಕೆಯಲ್ಲಿ ಪ್ರಕಟವಾಯಿತು. ಬಹಳ ಹಿಂದೆ ಕುಲಪತಿ ಮಹಾಶಯರೊಬ್ಬರು ವಿಶ್ವವಿದ್ಯಾಲಯದ ಉಪಕುಲಪತಿಯವರನ್ನು ಹಳ್ಳಿಶಾಲೆಯ ಮಾಸ್ತರನೊಬ್ಬನನ್ನು ಹೆದರಿಸುವಂತೆ ಗದರಿಸುತ್ತಾ ನಿಮ್ಮ ವಿಶ್ವವಿದ್ಯಾಲಯಕ್ಕೆ ಬರುವ ಗ್ರ್ಯಾಂಟ್‌ಗಳನ್ನೆಲ್ಲ ತಡೆಹಿಡಿಯುತ್ತೇನೆ ಎಂದು ಗುಡುಗಿದ್ದರು. ಈ ಪ್ರಹಸನದ ವಿಡಿಯೋ ತುಣುಕುಗಳು ಟಿ.ವಿಗಳಲ್ಲಿ ಕಾಣಿಸಿಕೊಂಡಿತು. ಅಧಿಕಾರಶಾಹಿಯ ಕರಾಳ ಕವಲುಗಳು ಉನ್ನತ ಶಿಕ್ಷಣದಿಂದ ಹಿಡಿದು ಶಾಲಾ ಶಿಕ್ಷಣದವರೆಗೆ ಎಲ್ಲೆಲ್ಲೂ ವಿಸ್ತರಿಸಿಕೊಂಡು ಅಧಿಕಾರ ಮದದಲ್ಲಿ ಮೆರೆಯುವುದೇ ವ್ಯವಸ್ಥೆಯೊಂದರ ಪರಮಗುರಿ ಎಂಬ ಹೊಸ ಆದರ್ಶವೊಂದನ್ನು ಸ್ಥಾಪಿಸಿದಂತೆ ಕಂಡುಬರುತ್ತಿದೆ.

ಜಗತ್ತಿನ ಅತಿದೊಡ್ಡ ಪ್ರಜಾಸತ್ತಾತ್ಮ ವ್ಯವಸ್ಥೆಯುಳ್ಳ ದೇಶ ಎಂಬ ಹೆಗ್ಗಳಿಕೆಯ ನಡುವೆ ನಮ್ಮ ಶಿಕ್ಷಣ ಪ್ರಜಾಸತ್ತಾತ್ಮಕತೆಯ ಅತಿಮುಖ್ಯ ಮೌಲ್ಯ 'ಸಮಾನತೆ'ಯನ್ನು ಶಾಲಾಶಿಕ್ಷಣದ

ದೀನಬಂಧು ಶಿಕ್ಷಕ ಸಂಪನ್ಮೂಲ ಕೇಂದ್ರ, ದೀನಬಂಧು ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ, ರಾಮಸಮುದ್ರ ಟೌನ್, ಚಾಮರಾಜನಗರ–571313
ದೂರವಾಣಿ: 9901513365 ಇ–ಮೇಲ್ deenabandhutrc@gmail.com ವೆಬ್ ಸೈಟ್ ವಿಳಾಸ: www. deenabandhutrc.org

Deenabandhu school is supported by INDO-MIM, Bangalore

ಆರಂಭಿಕ ಬಾಲ್ಯದ ಬೆಳವಣಿಗೆ ಮತ್ತು ಶಿಕ್ಷಣ

ಡಾ. ಪ್ರಶಾಂತ್ ಎನ್ ಶ್ರೀನಿವಾಸ್
MBBS, MPH, PhD (Public health)
ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್, ಬೆಂಗಳೂರು.
ಫೀಲ್ಡ್ ಸ್ಟೇಷನ್, ಬಿಳಿಗಿರಿ ರಂಗನಬೆಟ್ಟ, ಚಾಮರಾಜನಗರ.

ಸಿದ್ದಮ್ಮ ಗಾತ್ರದಲ್ಲಿ ಚಿಕ್ಕಮೂರ್ತಿ. ಅವಳು ಓದುತ್ತಿದ್ದ ಸರ್ಕಾರಿ ಶಾಲೆಯ ನಾಲ್ಕನೇ ತರಗತಿಯಲ್ಲಿ ಇದ್ದದ್ದು 30 ಮಕ್ಕಳು. ಅವಳ ಬಗ್ಗೆ ಶಿಕ್ಷಕರನ್ನು ಕೇಳಿದರೆ, ಅವರ ಮಾತಿನಲ್ಲಿ ಮೊದಲು ಕೇಳಿ ಬರುವ ವಿಷಯವೇನೆಂದರೆ ಬಾಲಕಿಯದು ಅಂತರ್ಮುಖಿ ಸ್ವಭಾವ; "ಅವಳು ಮಾತಾಡೊದೇ ಇಲ್ಲ; ಬಹಳ ನಾಚಿಕೆ". ಇದು ಶಿಕ್ಷಕರ ಅನಿಸಿಕೆ. ಶಾಲಾ ಕಾರ್ಯಕ್ರಮಗಳಲ್ಲಿ, ಪರೀಕ್ಷೆಗಳಲ್ಲಿ, ಅಂಕಗಳಿಕೆಯಲ್ಲಿ ಯಾವಾಗಲೂ ಎಲ್ಲರಿಗಿಂತಲೂ ಹಿಂದೆ. ಗಣಿತ, ಕನ್ನಡ ಭಾಷಾ ಕೌಶಲ್ಯ, ಇವೆಲ್ಲದರಲ್ಲೂ ತನ್ನ ಸಹಪಾಠಿಗಳಿಗಿಂತ ಹಿಂದೆ. ಇಂಗ್ಲಿಷ್‌ಅಂತೂ ಇಲ್ಲವೇಇಲ್ಲ; ಮನೆಯಲ್ಲೋ ಇವೆಲ್ಲವನ್ನು ಗಮನಿಸಲು ಯಾರಿಲ್ಲ. ಅಪ್ಪ ದಿನಗೂಲಿಗೆ ಹೋದರೆ, ಇತ್ತೀಚಿಗೆ ಸಿಗುವ ಪ್ಯಾಕೆಟ್-ವಿಸ್ಕಿಯ ಮತ್ತಿನಲ್ಲೇ ರಾತ್ರಿ ಊಟದ ಸಮಯಕ್ಕೆ ಹಾಜರ್. ಹತ್ತಿರವೇ ಇರುವ ಮನೆಗಳಲ್ಲಿ ಮನೆಗೆಲಸ ಮಾಡುತ್ತಿರೋ ತಾಯಿಯ ಸಂಪಾದನೆ ಇವಳು ಮತ್ತು ಇವಳ ಅಣ್ಣನ ಊಟ, ಬಟ್ಟೆ, ಪುಸ್ತಕ ಪೂರೈಸುವುದರಲ್ಲೇ ಖಾಲಿ. ಸಿದ್ದಮ್ಮನನ್ನು ಮಾತಾಡಿಸಿದರೆ ಅವಳಿಗೆ ಯಾವುದೇ ಆಕಾಂಕ್ಷೆಗಳೂ ಇಲ್ಲ, ಸ್ಪರ್ಧೆಮಾಡುವ ಉತ್ಸಾಹವಂತೂ ಇಲ್ಲವೇ ಇಲ್ಲ. ಹೀಗೆ ಏನನ್ನಾದರೂ ಸಾಧಿಸುವ ಮನಸ್ಸೆ ಇಲ್ಲದಂತ ಮಕ್ಕಳ ಬಗ್ಗೆ ಏನು ಮಾಡಬೇಕು. ಇದು ಕೇವಲ ಮೊಂಡುತನವೇ? ಅವಳ ವರ್ತನೆಯೇ ಹೀಗೆ ಎಂದು ಭಾವಿಸಬೇಕೆ? ಅಥವಾ ಇದು ಸೋಮಾರಿತನವೆ? ಅಥವಾ ಹೆತ್ತವರು ಶಿಕ್ಷಣಕ್ಕಾಗಿ ಬೆಂಬಲ ಕೊಡುತ್ತಿಲ್ಲವೆ?

ಸಿದ್ದಮ್ಮನ ಈ ಕಾಲ್ಪನಿಕ ಕಥೆ ಯಾವುದೇ ಹಿಂದುಳಿದ ಅಥವಾ ಗ್ರಾಮೀಣ ಪ್ರದೇಶದ ಶಾಲೆಯ ಮಕ್ಕಳ ಕಥೆಯಾಗಿರಬಹುದು. ಯಾವುದೇ ತರಗತಿಯನ್ನು ಗಣನೆಗೆ ತೆಗೆದುಕೊಂಡರೂ ಎಲ್ಲಾ ತರಗತಿಗಳಲ್ಲೂ ಕೆಲವು ಮಕ್ಕಳು ಶೈಕ್ಷಣಿಕವಾಗಿ ಹಿಂದುಳಿದಿರುವುದು ಸಹಜ. ಸರಿಯಾದ ಪ್ರಾಥಮಿಕ ಶಿಕ್ಷಣವು ಜೀವನೋಪಾಯಕ್ಕೆ ದಾರಿಮಾಡಿ ಕೊಡುತ್ತದೆ; ಸಾಮಾಜಿಕ ಸ್ಥಾನಮಾನ ಮತ್ತು ಆಧುನಿಕ ಸೌಲಭ್ಯಗಳನ್ನನುಭವಿಸಲು, ಆನಂದಿಸಲು ಬುನಾದಿಯಾಗಿದೆ. ನಮ್ಮ ಮಕ್ಕಳ ಗುಣಮಟ್ಟದ ಪ್ರಾಥಮಿಕ ಶಿಕ್ಷಣದಿಂದಲೇ ವಂಚಿತರಾದರೆ ರಾಷ್ಟ್ರಮಟ್ಟದಲ್ಲಿ ನಾವು ಸಾಧಿಸಬಯಸುವ ಎಲ್ಲಾ ಆಶಯಗಳನ್ನು ಹೇಗೆ ಸಾಧಿಸಬಹುದು? ಪ್ರತಿಯೊಂದು ಮಗುವೂ ನಿರ್ದಿಷ್ಟ ಗುಣಗಳನ್ನು ಹೊಂದಿರುತ್ತದೆ; ಇದು ಎಲ್ಲರಿಗೂ ತಿಳಿದಿರುವ ವಿಷಯವೆ. ಹಾಗಾದರೆ ಮಕ್ಕಳು ಶಾಲಾಕಲಿಕೆಯಲ್ಲಿ ಹಿಂದುಳಿಯುವುದಕ್ಕೆ ಕಾರಣ ಅವರ ಸೋಮಾರಿತನ ಎಂದುಹೇಳಿ ಸುಮ್ಮನಾಗಿಬಿಡಬೇಕೆ? ಅಥವಾ ಓದಿನ ಬಗ್ಗೆ ಕಾಳಜಿವಹಿಸುತ್ತಿಲ್ಲ ಎಂದು ನಿರ್ಧರಿಸಿ ನಿಷ್ಠುರವಾಗಿರಬೇಕೆ? ಈ ಕುರಿತಾಗಿ ಬೆಳಕುಚೆಲ್ಲುವುದೇ ಈ ಲೇಖನದ ಗುರಿ.

ಭಾರತ ಸರ್ಕಾರವು ಇತ್ತೀಚಿಗೆ ಬಿಡುಗಡೆ ಮಾಡಿದ ನ್ಯಾಶನಲ್ ಅಚೀವ್‌ಮೆಂಟ್ ಸರ್ವೆ (NAS) 2021 ಇದರ ವರದಿ ಶಿಕ್ಷಣ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಎಲ್ಲರಿಗೂ ಕಾಳಜಿಯ ವಿಷಯವಾಗಿದೆ. ಕಳೆದ ವರ್ಷದ ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ NAS ವರದಿಯನ್ನು ಚರ್ಚಿಸುತ್ತ ಬೆಂಗಳೂರಿನ ಪಬ್ಲಿಕ್ ಅಫೇರ್ಸ್ ಸೆಂಟರ್ ನಿರ್ದೇಶಕರಾದ ಗುರುಚರಣ್ ಗೊಳ್ಳೇರ್‌ಕೇರಿ ಅವರು ಹೇಳುತ್ತಾರೆ "ಜ್ಞಾನವು ಶಿಕ್ಷಣದ ಹೃದಯ ಎಂದು ಭಾವಿಸುವುದಾದರೆ ಮತ್ತು ಶಿಕ್ಷಣವನ್ನು ಭವಿಷ್ಯದ ಪೀಳಿಗೆಗೆ ಇಂದು ನಾವು ಹಾಕುವ ಬುನಾದಿ ಎಂದು ಪರಿಗಣಿಸುವುದಾದರೆ, ನಾವು ಈ ಎರಡರಲ್ಲೂ ಆಗುತ್ತಿರುವ ತೀವ್ರ ಕುಸಿತವನ್ನು ವಿಶ್ಲೇಷಿಸಬೇಕು" ಎಂದಿದ್ದಾರೆ. NAS 2021 ಸಮಗ್ರ ಸಮೀಕ್ಷೆಯು ಗ್ರಾಮೀಣ ಮತ್ತು ನಗರಗಳೆರಡರಿಂದಲೂ 720 ಜಿಲ್ಲೆಗಳ 1.18 ಲಕ್ಷ ಶಾಲೆಗಳ ಸುಮಾರು 34 ಲಕ್ಷ ವಿದ್ಯಾರ್ಥಿಗಳನ್ನು ಒಳಗೊಂಡಿತ್ತು. ಮಕ್ಕಳ ಜ್ಞಾನಾರ್ಜನಾ ಸಾಮರ್ಥ್ಯ ಮತ್ತು ಶೈಕ್ಷಣಿಕ ಸಾಧನೆಗಳಲ್ಲಿನ ತಾರತಮ್ಯಕ್ಕೆ ವ್ಯಕ್ತಿಗತವಾದ ಸಾಮರ್ಥ್ಯಗಳು ಮಾತ್ರ ಕಾರಣವಲ್ಲ. ಇದಕ್ಕೆ ಇರುವ ನಿಜವಾದ ಕಾರಣವನ್ನು ನಾವು ಮಕ್ಕಳ ಜೀವನದ ಮೊದಲು 1000 ದಿನಗಳಲ್ಲಿ ಅವರಿಗೆ ದೊರೆತಿರುವ ಸಮಗ್ರ ಆರೈಕೆಯಲ್ಲಿದೆ ಎಂಬುದನ್ನು ಗುರುತಿಸಬೇಕು.

ಮಕ್ಕಳ ಶೈಕ್ಷಣಿಕ ಪ್ರಗತಿಯು ಕೇವಲ ವ್ಯಕ್ತಿಗತವಾಗಿ ಬಂದ ಉತ್ಸಾಹ ಅಥವಾ ಬೆಂಬಲವನ್ನು ಮಾತ್ರ ಅವಲಂಬಿಸಿಲ್ಲ. ಬೆಳವಣಿಗೆಯ ಮೊದಲ 1000 ದಿನಗಳಲ್ಲಿ ಮಕ್ಕಳ ದೈಹಿಕ-ಮಾನಸಿಕ ಬೆಳವಣಿಗೆಗೆ ಪೂರಕ ವಾತಾವರಣ ದೊರೆಯುವುದೂ ಸಹ ನಿರ್ಣಾಯಕವಾಗುತ್ತದೆ. ಅದರಲ್ಲೂ ಮುಖ್ಯವಾಗಿ ಯಾವ ರೀತಿಯ ಪೌಷ್ಠಿಕಾಂಶ ಮತ್ತು ಆರೈಕೆ ಸಿಕ್ಕಿದೆ ಎಂಬುದೂ ಮುಖ್ಯವಾಗುತ್ತದೆ. ತುಳಿತಕ್ಕೊಳಗಾದ ತಳಸಮುದಾಯದ ಹಿನ್ನೆಲೆಯಿಂದ ಬಂದಿರುವ ಮಕ್ಕಳು, ಅರಣ್ಯಾವಾಸಿ ಆದಿವಾಸಿ ಸಮುದಾಯದಿಂದ ಬಂದ ಮಕ್ಕಳು ತೀವ್ರವಾದ ಸಾಮಾಜಿಕ-ಆರ್ಥಿಕ ಹಿನ್ನಡೆಯನ್ನು ಅನುಭವಿಸುತ್ತಾರೆ. ಹುಟ್ಟೂರಿನಿಂದ ದೂರವಿರುವ ಬಡ ವಲಸಿಗ ಕುಟುಂಬಗಳಲ್ಲಿ ಜನಿಸಿದ ಮಕ್ಕಳು, ಈಗಾಗಲೇ ಇರುವ ಆರ್ಥಿಕ ಸಾಮಾಜಿಕ ಕಷ್ಟಗಳ ಜೊತೆಗೆ ಪೋಷಕರ ನಿರ್ಲಕ್ಷ್ಯವನ್ನೂ ಅನುಭವಿಸಬೇಕಾಗುತ್ತದೆ. ಹೀಗಾಗಿ ಈ ಎಲ್ಲ ತಳಸಮುದಾಯದ ಮಕ್ಕಳಿಗೆ ಅವರ ಬೆಳವಣಿಗೆಯ ಮೊದಲ 1000 ದಿನಗಳಲ್ಲಿ ಸಿಗಬೇಕಾದ ಕನಿಷ್ಠ ಮಾನಸಿಕ ನೆಮ್ಮದಿಯಾಗಲಿ, ಪೌಷ್ಠಿಕಾಂಶಗಳುಳ್ಳ ಆಹಾರ-ಪಾನೀಯಗಳಾಗಲಿ ದೊರೆಯುವುದಿಲ್ಲ. ಆರೋಗ್ಯಕರ ಮೆದುಳಿನ ಬೆಳವಣಿಗೆಗೆ ಪೂರಕವಾದ ಯಾವುದೂ ದೊರೆಯದ ಈ ಮಕ್ಕಳು ಮುಂದೆ ಶಾಲೆಗಳಲ್ಲಿ ಹಿಂದೆ ಬೀಳುತ್ತಾರೆ.

ನಾವು ಸಾಮಾನ್ಯವಾಗಿ ಪ್ರಾಥಮಿಕ ಶಾಲೆಯನ್ನು ಭವಿಷ್ಯದ ಸಾಧನೆ ಮತ್ತು ಪ್ರಗತಿಗೆ ಬುನಾದಿಯೆಂದು ಪರಿಗಣಿಸುತ್ತೇವೆ. ಮಗುವಿನ ಜೀವನದ ಮೊದಲ 1000 ದಿನಗಳು ಅವರ ಭವಿಷ್ಯದ ಬೆಳವಣಿಗೆಯನ್ನು ರೂಪಿಸುವಲ್ಲಿ ವಿಶೇಷವಾಗಿ ಪ್ರಮುಖವಾಗಿವೆ ಎಂದು ಸಂಶೋಧನೆ ತೋರಿಸಿದೆ. ಈ ಅವಧಿಯಲ್ಲಿ, ಮಕ್ಕಳು ತ್ವರಿತ ಮೆದುಳಿನ ಬೆಳವಣಿಗೆಯನ್ನು ಅನುಭವಿಸುತ್ತಾರೆ. ಅವರ ಅರಿವಿನ ಗುಣಮಟ್ಟ ಮತ್ತು

ಭಾವನಾತ್ಮಕ ಬೆಳವಣಿಗೆಯ ಪ್ರಮಾಣ ಮತ್ತು ಗುಣಮಟ್ಟವನ್ನು ನಿರ್ಧರಿಸುವಲ್ಲಿ ಅವರ ಪರಿಸರವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಆರಂಭಿಕ ವರ್ಷಗಳ (ವಿಶೇಷವಾಗಿ ಮೊದಲ ಮೂರು ವರ್ಷಗಳು) ಆರೋಗ್ಯಕರ ಬೆಳವಣಿಗೆಯು ಶೈಕ್ಷಣಿಕ ಸಾಧನೆ, ಆರ್ಥಿಕ ಉತ್ಪಾದಕತೆ, ಜವಾಬ್ದಾರಿಯುತ ಪೌರತ್ವ ಇತ್ಯಾದಿಗಳಿಗೆ ಭದ್ರ ಬುನಾದಿಯನ್ನು (Building blocks) ಒದಗಿಸುತ್ತದೆ. ಮುಂಬರುವ ಪೀಳಿಗೆಯ ಒಟ್ಟಾರೆ ಯಶಸ್ಸು ಈ ಅಂಶಗಳನ್ನು ಆಧರಿಸಿದೆ.

ತಮ್ಮ ಆರಂಭಿಕ ವರ್ಷಗಳಲ್ಲಿ ಸರಿಯಾದ ಪೋಷಣೆ, ಆರೈಕೆ ಮತ್ತು ಸೂಕ್ತ ಸಂವೇದನೆಗಳನ್ನು ಪಡೆಯುವ ಮಕ್ಕಳು ಉತ್ತಮ ಅರಿವಿನ ಮಟ್ಟವನ್ನು ಸಾಧಿಸುತ್ತಾರೆ; ಅವರ ಭಾವನಾತ್ಮಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು ಸಾಧ್ಯವಿದೆ ಎಂದು ಅಧ್ಯಯನಗಳು ತೋರಿಸಿವೆ. ಇದಲ್ಲದೆ, ಪೋಷಕರ ಬೆಂಬಲ ಮತ್ತು ಮಕ್ಕಳನ್ನು ಗಂಭೀರವಾಗಿ ಪರಿಗಣಿಸಿ ಒಳಗೊಳ್ಳುವ ಮನೆಯ ವಾತಾವರಣ ಗುಣಮಟ್ಟದ ಭಾವನಾತ್ಮಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಸಾಕಷ್ಟು ಕಾಳಜಿ ಮತ್ತು ಹಿರಿಯರ ಗಮನವನ್ನು ಪಡೆಯುವ ಮನೆಗಳಲ್ಲಿ ಬೆಳೆಯುವ ಮಕ್ಕಳು ಶಾಲೆಯಲ್ಲಿ ಮತ್ತು ಜೀವನದ ಇತರ ರಂಗಗಳಲ್ಲಿ ಸಫಲರಾಗುತ್ತಾರೆ. ಮೊದಲನೆ 3 ವರ್ಷಗಳಲ್ಲಿ ಮಕ್ಕಳ ಪರಿಸರದೊಂದಿಗೆ ಸಂವಹನ ನಡೆಸುವಾಗ ಅವರ ಮೆದುಳು ಕ್ಷಣದಿಂದ ಕ್ಷಣಕ್ಕೆ ಹೊಸ ನಿರ್ಮಾಣಗಳನ್ನು ಒಳಗೊಳ್ಳುತ್ತದೆ. ಈ ಸಂದರ್ಭದಲ್ಲಿ ಪ್ರತಿ ಸೆಕೆಂಡಿಗೆ ಒಂದು ದಶಲಕ್ಷಕ್ಕೂ ಹೆಚ್ಚು ನರ ಸಂಪರ್ಕಗಳು ಅವರ ಮೆದುಳಿನಲ್ಲಿ ರೂಪುಗೊಳ್ಳುತ್ತವೆ; ಜೀವನದ ಬೇರೆ ಯಾವುದೇ ಹಂತದಲ್ಲಿ ಈ ರೀತಿಯ ನರ ಸಂಪರ್ಕಗಳ ಬೆಳವಣಿಗೆ ಮತ್ತೆ ಕಾಣಿಸುವುದಿಲ್ಲ. ಮಗುವಿನ ಆರಂಭಿಕ ವಯಸ್ಸಿನ ಅನುಭವಗಳು ಅವರ ಮೆದುಳಿನ ಬೆಳವಣಿಗೆಯೊಂದಿಗೆ ನಿರ್ಣಾಯಕ ಪ್ರಭಾವ ಉಂಟುಮಾಡುತ್ತದೆ, ಇದು ಜೀವನದುದ್ದಕ್ಕೂ ಕಲಿಕೆ, ಆರೋಗ್ಯ ಮತ್ತು ನಡವಳಿಕೆಗೆ ಬಲವಾದ ಅಡಿಪಾಯವನ್ನು ಒದಗಿಸುತ್ತದೆ. ವಿರುದ್ಧ ಸಂವೇದನೆಗಳೇ ತುಂಬಿರುವ ವಾತಾವರಣದಲ್ಲಿ ಇದೇ ಪ್ರಕ್ರಿಯೆಯು ಮಕ್ಕಳಿಗೆ ದುರ್ಬಲವಾದ ಭವಿಷ್ಯವನ್ನು ರಚಿಸಬಹುದು. ಮಕ್ಕಳು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಸಾಧಿಸಲು ಅವರಿಗೆ ಆರೋಗ್ಯ, ರಕ್ಷಣೆ ಮತ್ತು ಪೋಷಣೆಗಳು ದೊರೆಯಬೇಕು. ಮಾನವ ಹಕ್ಕುಗಳಿಗೆ ಹೆಚ್ಚುಗಮನ ಕೊಡುವ ನಾವು ಮಕ್ಕಳಿಗೆ ಹಾನಿಯಿಂದ ರಕ್ಷಣೆ ಸಿಗುವಂತೆ ನೋಡಿಕೊಳ್ಳಬೇಕು. ಮಕ್ಕಳಿಗೆ ಸುರಕ್ಷತೆಯ ಪ್ರಜ್ಞೆ ಹುಟ್ಟುವಂತೆ ನಂಬಿಕೆಯ ವಾತಾವರಣ ಸೃಷ್ಟಿಸಬೇಕು. ಇದಕ್ಕೆ ಪೂರಕವಾಗಿ ಆರಂಭಿಕ ಕಲಿಕೆಗೆ ಅವಕಾಶಗಳು ಸರಿಯಾಗಿರಬೇಕು; ಮಕ್ಕಳು ನಿರ್ಭೀತಿಯಿಂದ ಪೋಷಕರು ಮತ್ತು ಪಾಲಕರ ಜೊತೆ ಬೆರೆತು ಮಾತನಾಡುವುದು, ಹಾಡುವುದು ಮತ್ತು ಆಡುವಂತಹ ವಾತಾವರಣವಿರಬೇಕು. ಮಕ್ಕಳ ಭಾವನೆಗೆ ಸ್ಪಂದಿಸುವ, ಆರೈಕೆ ಮಾಡುವ ಪ್ರೀತಿಯಿಂದ ಸಲಹುವ ಪೋಷಕರ ವರ್ತನೆ ನಿರ್ಣಾಯಕವಾಗುತ್ತದೆ. ಅಭಿವೃದ್ಧಿ ಹೊಂದುತ್ತಿರುವ ಮೆದುಳನ್ನು ಪೋಷಿಸಲು ಮತ್ತು ಬೆಳೆಯುತ್ತಿರುವ ದೇಹಗಳನ್ನು ಉತ್ತೇಜಿಸಲು ಇವೆಲ್ಲವೂ ಅಗತ್ಯವಿದೆ.

ಬಡತನದಲ್ಲಿ ವಾಸಿಸುವ ಅಥವಾ ಸಂಘರ್ಷ ಮತ್ತು ಬಿಕ್ಕಟ್ಟಿನಿಂದ ಬಾಧಿತರಾಗಿರುವ ಮಕ್ಕಳು, ವಲಸೆ ಹೋಗುವ ಮಕ್ಕಳು, ತಾರತಮ್ಯವನ್ನು ಎದುರಿಸುತ್ತಿರುವ ಸಮುದಾಯಗಳಿಗೆ ಸೇರಿದ ಮಕ್ಕಳು ಮತ್ತು ವಿಕಲಾಂಗ ಮಕ್ಕಳೂ ಸೇರಿದಂತೆ – ಪ್ರಪಂಚದ ಲಕ್ಷಾಂತರ ಹಿಂದುಳಿದ ಮಕ್ಕಳಿಗೆ ನಾವು ಈ ಅವಕಾಶದ ಕಿಟಕಿಯನ್ನು ತೆರೆಯುವುದಿಲ್ಲ. ಲಕ್ಷಾಂತರ ಮಕ್ಕಳು ಹಿಂಸಾಚಾರ, ಕಲುಷಿತ ಪರಿಸರ ಮತ್ತು ತೀವ್ರ ಒತ್ತಡಕ್ಕೆ ಒಡ್ಡಿಕೊಳ್ಳುತ್ತಾ ಬೆಳೆಯುತ್ತಾರೆ. ಅವರಿಗೆ ಅಗತ್ಯವಿರುವ ಪೌಷ್ಟಿಕಾಂಶ ಅಥವಾ ಆರೋಗ್ಯ ರಕ್ಷಣೆ ಸಿಗುವುದಿಲ್ಲ. ಹೀಗಾಗಿ ಅವರು ಕಲಿಯುವ ಅವಕಾಶಗಳನ್ನು ಕಳೆದುಕೊಳ್ಳುತ್ತಾರೆ, ಬೆಳೆಯುತ್ತಿರುವ ಅವರ ಮೆದುಳು ಅಭಿವೃದ್ಧಿ ಹೊಂದಲು ಅಗತ್ಯವಿರುವ ಪ್ರಚೋದನೆಗಳು ಸಿಗದೆ ಸರಿಯಾಗಿ ಬೆಳೆಯುವುದಿಲ್ಲ. ಅವರ ಪೋಷಕರು ಮತ್ತು ಆರೈಕೆದಾರರು ಈ ಸಂದರ್ಭಗಳಲ್ಲಿ ತಮ್ಮ ಮಕ್ಕಳಿಗೆ ಪೋಷಣೆಯ ಆರೈಕೆಯನ್ನು ಒದಗಿಸಲು ಅಗತ್ಯವಾದ ಸಮಯ, ಸಂಪನ್ಮೂಲಗಳು ಮತ್ತು ಸೇವೆಗಳನ್ನು ಪಡೆಯಲು ಹೆಣಗಾಡುತ್ತಾರೆ.

ವಿಶ್ವಸಂಸ್ಥೆಯ ಮಕ್ಕಳ ಅಭಿವೃದ್ಧಿ ಮತ್ತು ಮಕ್ಕಳ ಹಕ್ಕುಗಳ ಕುರಿತು ಕೆಲಸಮಾಡುತ್ತಿರುವ UNICEF ಪ್ರಕಾರ, ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ ಸಿಗುವ ಆರಂಭಿಕ ಬಾಲ್ಯದ ಬೆಳವಣಿಗೆ ಅವಕಾಶವನ್ನು ಮಕ್ಕಳು ಕಳೆದುಕೊಂಡರೆ ಈ ಮಕ್ಕಳು ತಮ್ಮ ಜೀವನದಲ್ಲಿ ಗಳಿಸಬಹುದಾಗಿದ್ದ ಪೂರ್ಣ ಸಾಮರ್ಥ್ಯವನ್ನು ಪಡೆಯುವ ಮೊದಲೇ ಮರಣಹೊಂದುತ್ತಾರೆ. ಬದುಕು ಸಾಗಿಸುವಾಗ ದೈಹಿಕ ಮತ್ತು ಮಾನಸಿಕ ಅನಾರೋಗ್ಯದೊಂದಿಗೆ ಜೀವನವನ್ನು ನಡೆಸುತ್ತಾರೆ; ಜೀವನ ಕೌಶಲಗಳನ್ನು ಕಲಿಯಲು ಮತ್ತು ನಂತರದ ಜೀವನೋಪಾಯಕ್ಕಾಗಿ ಹೆಣಗುತ್ತಾರೆ. ನಮ್ಮ ದೇಶದ ಸಮಗ್ರ ಬೆಳವಣಿಗೆಯ ಮೇಲೆ ಇದು ಪರಿಣಾಮ ಬೀರುತ್ತದೆ. ಸಾಮಾಜಿಕ ನ್ಯಾಯವನ್ನು ಬಯಸುವ ನಮ್ಮ ಪ್ರಜಾಪ್ರಭುತ್ವದ ಮೇಲೆ ದುಷ್ಪರಿಣಾಮವನ್ನುಂಟುಮಾಡುತ್ತದೆ. UNICEF ಮತ್ತು WHO ಪ್ರಕಾರ ಮಕ್ಕಳಿಗೆ ಜೀವನದಲ್ಲಿ ಉತ್ತಮ ಆರಂಭವನ್ನು ನೀಡಲು ನಮ್ಮ ದೇಶ ಮತ್ತು ಸಮಾಜ ವಿಫಲವಾದರೆ, ಭವಿಷ್ಯದಲ್ಲಿ ನಮ್ಮ ಸಮಾಜ ಬಡತನದಿಂದ ನರಳುತ್ತದೆ, ಅಸಮಾನತೆಗಳು ಹೆಚ್ಚುತ್ತವೆ ಹಾಗೂ ನಮ್ಮ ಸಮಾಜದ ಸ್ಥಿರತೆಗೆ ಧಕ್ಕೆಯನ್ನುಂಟಾಗಬಹುದಾದ ಸಾಧ್ಯತೆಗಳಿವೆ.

ಪ್ರತಿ ಮಗುವಿಗೆ ಶಿಕ್ಷಣದ ಹಕ್ಕಿದೆ ಎಂದು ಪ್ರಪಂಚದ ಎಲ್ಲಾ ರಾಷ್ಟ್ರಗಳು ದೃಢೀಕರಿಸಿರುವುದು ಆಧುನಿಕ ಯುಗದ ಪ್ರಮುಖ ಸಾಧನೆಗಳಲ್ಲಿ ಒಂದಾಗಿದೆ. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಆರ್ಟಿಕಲ್ 26 ರ ಪ್ರಕಾರ ಶಿಕ್ಷಣದ ಸಾರ್ವತ್ರಿಕ ಪ್ರವೇಶವನ್ನು ವಾಸ್ತವವಾಗಿ ಮಾನವ ಹಕ್ಕು ಎಂದು ಪ್ರತಿಪಾದಿಸಲಾಗಿದೆ, ಇದಕ್ಕೆ ಭಾರತವೂ ಸಹಿ ಮಾಡಿದೆ. ನಮ್ಮ ವಿದ್ಯಾರ್ಥಿಗಳ ವೈವಿಧ್ಯಮಯ ಕೌಟುಂಬಿಕ ಸಂದರ್ಭಗಳು ಮತ್ತು ಸಾಮಾಜಿಕ ಅಸಮಾನತೆಗಳು ತರಗತಿಯ ಕಾರ್ಯಕ್ಷಮತೆಯ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ತಿಳಿದುಕೊಳ್ಳುವುದು ಅತ್ಯಗತ್ಯ. ಎಲ್ಲಾ ವಿದ್ಯಾರ್ಥಿಗಳನ್ನು ಅವರ ಹಿನ್ನೆಲೆಯನ್ನು ಲೆಕ್ಕಿಸದೆ ಬೆಂಬಲಿಸುವ ಕಲಿಕೆಯ ವಾತಾವರಣವನ್ನು ರಚಿಸಲು ನಾವು ಶ್ರಮಿಸಬೇಕು. ಇದರರ್ಥ ವಿಭಿನ್ನ

ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯಿಂದ ಬರುವ ವಿದ್ಯಾರ್ಥಿಗಳ ನಿರ್ದಿಷ್ಟ ಅಗತ್ಯಗಳು ಮತ್ತು ಸವಾಲುಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಪರಿಹರಿಸುವುದು.

ನಮ್ಮ ವಿದ್ಯಾರ್ಥಿಗಳ ವೈವಿಧ್ಯಮಯ ಅನುಭವಗಳು ಮತ್ತು ಹಿನ್ನೆಲೆಗಳನ್ನು ಗಣನೆಗೆ ತೆಗೆದುಕೊಳ್ಳುವ, ಸಾಂಸ್ಕೃತಿಕವಾಗಿ ಸ್ಪಂದಿಸುವ ಬೋಧನಾ ತಂತ್ರಗಳನ್ನು ರೂಪಿಸುವುದು ಒಂದು ವಿಧಾನವಾಗಿದೆ. ಬೇರೆಬೇರೆ ವಿದ್ಯಾರ್ಥಿಗಳ ಅನನ್ಯ ಅಗತ್ಯತೆಗಳು ಮತ್ತು ಕಲಿಕೆಯ ಶೈಲಿಗಳನ್ನು ಬೆಂಬಲಿಸಲು ನಾವು ವಿಶಿಷ್ಠ ಕ್ರಮಗಳನ್ನು ಸಹ ಬಳಸಬಹುದು. ಅಲ್ಲದೆ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳೊಂದಿಗೆ ಬಲವಾದ ಸಂಬಂಧಗಳನ್ನು ಬೆಳೆಸಿಕೊಂಡು ಮಕ್ಕಳ ವಾಸ್ತವ ಪರಿಸ್ಥಿತಿಗಳ ಒಳನೋಟವನ್ನು ಪಡೆದು ಶೈಕ್ಷಣಿಕ ಯಶಸ್ಸನ್ನು ಸಾಧಿಸುವಲ್ಲಿ ಮಕ್ಕಳಿಗೆ ನೆರವಾಗಬಹುದು.

ಮಕ್ಕಳು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳಬೇಕಾದರೆ UNICEF ಸಂಸ್ಥೆಯ ಪ್ರಕಾರ ಅವರಿಗೆ "Nurturing care" (ಪೋಷಣೆ–ಆರೈಕೆ) ಅಗತ್ಯವಿದೆ. ಕೇವಲ ಆಹಾರ ಮತ್ತು ವಸತಿಯ ಅವಶ್ಯಕತೆಗಳನ್ನು ಪೂರೈಸಿದರೆ ಸಾಲುವುದಿಲ್ಲ. ಮಕ್ಕಳ ಬೆಳವಣಿಗೆಯ ಮೇಲೆ ಕಾಳಜಿ ವಹಿಸುವುದು, ಅವರಿಗೆ ಸುರಕ್ಷಿತ ಭಾವನೆ ಮೂಡಿಸುವುದು ಮತ್ತು ಅವರು ಅಭಿವೃದ್ಧಿ ಹೊಂದಲು ಪ್ರೀತಿಯ ವಾತಾವರಣವನ್ನು ಸೃಷ್ಟಿಸುವುದು ಬಹಳ ಮುಖ್ಯ. ಪೋಷಕರು ತಮ್ಮದೇ ಆದ ಸಾಮಾಜಿಕ, ಆರ್ಥಿಕ ಒತ್ತಡಗಳನ್ನು ನಿಭಾಯಿಸುತ್ತಿರುವಾಗ ಮಕ್ಕಳ ಕಡೆ ಗಮನವೀಯಲಾಗುವುದಿಲ್ಲ. ಅಥವಾ ಮನೆಗಳಲ್ಲಿ ಒಬ್ಬರು ಅಥವಾ ಇಬ್ಬರೂ ಪೋಷಕರು ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದರೆ ಅಥವಾ ಕಾರಣಾಂತರಗಳಿಂದ ಮಗುವಿಗೆ ಅಲಭ್ಯವಾಗಿದ್ದರೆ ಮಕ್ಕಳ ಬೆಳವಣಿಗೆಯಲ್ಲಿ ತುಂಬಲಾರದ ಕೊರತೆಯುಂಟಾಗುತ್ತದೆ. ಈ ಹಿಂದೆಯೇ ಹೇಳಿದಂತೆ ಗರ್ಭಾವಸ್ಥೆಯಿಂದ ಮೂರು ವರ್ಷದವರೆಗಿನ ಸಮಯ ಮಕ್ಕಳ ಮೆದುಳಿನ ಬೆಳವಣಿಗೆಗೆ ನಿರ್ಣಾಯಕವಾಗಿದೆ. Nurturing care (ಪೋಷಣೆ–ಆರೈಕೆ) ಅಂದರೆ ದೈಹಿಕ ಪೋಷಣೆ ಮಾತ್ರವಲ್ಲ, ಸೂಕ್ತವಾದ ಭಾವನಾತ್ಮಕ, ಸಾಮಾಜಿಕ ಬೆಳವಣಿಗೆಗಳು ಮಕ್ಕಳು ಅನಿವಾರ್ಯವಾಗಿ ಎದುರಿಸುವ ವ್ಯತಿರಿಕ್ತ ಸನ್ನಿವೇಶಗಳಲ್ಲಿ ತಮ್ಮನ್ನೇ ತಾವು ರಕ್ಷಿಸಿಕೊಳ್ಳಲು ಸಹಾಯಮಾಡುತ್ತವೆ. Nurturing care (ಪೋಷಣೆ–ಆರೈಕೆ) ದೊರೆತಿರುವ ಮಕ್ಕಳು ತಾವಷ್ಟೆ ಉತ್ತಮ ಬೆಳವಣಿಗೆಯನ್ನು ಅನುಭವಿಸುವುದಲ್ಲದೆ ಮುಂದೆ ತಮ್ಮ ಮಕ್ಕಳಿಗೂ ಇದೆ ರೀತಿಯ ಆರೈಕೆ ಕೊಡುವ ಸಾಧ್ಯತೆಗಳು ಹೆಚ್ಚಿರುತ್ತದೆ (Inter-generational impact of nurturing care). ಒಳ್ಳೆಯ ಪೋಷಣೆ–ಆರೈಕೆ ಇರುವ ಸಮಾಜದಲ್ಲಿ ಆರೋಗ್ಯ ಮತ್ತು ಸಾಮಾಜಿಕ ಒಗ್ಗಟ್ಟನ್ನು ಕಾಣಬಹುದು. ಪೋಷಕರು, ಕುಟುಂಬಗಳು ಮತ್ತು ಇತರ ಆರೈಕೆದಾರರು ಪೋಷಣೆ–ಆರೈಕೆಯ ಮುಖ್ಯ ಪೂರೈಕೆದಾರರು. ಆದ್ದರಿಂದ, ಮಕ್ಕಳು ಶಾಲೆಗಳಲ್ಲಿ ಯಶಸ್ವಿಯಾಗಬೇಕಾದರೆ, ಅವರು ಶಾಲೆಗಳಿಗೆ ಕಾಲಿಡುವ ಮೊದಲು ಅವರ ಮನೆಗಳು ಮತ್ತು ಸಾಮಾಜಿಕ ಪರಿಸರವೂ ಸುರಕ್ಷಿತವಾಗಿಯೂ, ಅನುಕೂಲಕರವಾಗಿಯೂ ಇದೆ ಎಂದು ಖಚಿತಪಡಿಸಿಕೊಳ್ಳುವ ನೀತಿಗಳನ್ನು ನಾವು ಅನುಷ್ಠಾನಕ್ಕೆ ತರಬೇಕು, ಇದಕ್ಕೆ ಪೂರಕವಾದ ಕಾರ್ಯಕ್ರಮಗಳಲ್ಲಿ ನಾವು ಹೂಡಿಕೆ ಮಾಡಬೇಕಾಗುತ್ತದೆ.

ಲೇಖನವನ್ನು ಓದಿ ಪ್ರತಿಕ್ರಿಯಿಸಿದ್ದಕ್ಕಾಗಿ ಡಾ. ಗಿರಿಧರ ಬಾಬು ಮತ್ತು ಪ್ರವೀಣ್ ರಾವ್ ಅವರಿಗೆ ಧನ್ಯವಾದಗಳು. ಲೇಖನವು COINCIDE ಎಂಬ ಯೋಜನೆಯಲ್ಲಿ ನಡೆಯುತ್ತಿರುವ ಸಂಶೋಧನೆಯನ್ನು ಆಧರಿಸಿದೆ. ಈ ಯೋಜನೆ ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆ ಮತ್ತು ವೆಲ್‌ಕಮ್ ಟ್ರಸ್ಟ್ ಇಂಡಿಯಾ ಅಲೈಯನ್ಸ್ ಟೀಮ್ ಸೈನ್ಸ್ ಅನುದಾನದಿಂದ ಬೆಂಬಲಿಸಲಾಗಿದೆ.

****

ಪ್ರಖ್ಯಾತ ಭಾರತೀಯ–ಅಮೇರಿಕನ್ ಸಂಖ್ಯಾಶಾಸ್ತ್ರಜ್ಞ **ಕಲ್ಯಂಪುಡಿ ರಾಧಾಕೃಷ್ಣ ರಾವ್** (ಸಿ.ಆರ್.ರಾವ್) ಅವರು 2023ರ ಸಂಖ್ಯಾಶಾಸ್ತ್ರದ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಪಡೆಯಲಿದ್ದಾರೆ. ಈ ಪ್ರಶಸ್ತಿಯನ್ನು ಗಣಿತದ ನೊಬೆಲ್ ಪ್ರಶಸ್ತಿ ಎಂದೇ ಕರೆಯುತ್ತಾರೆ. ಇವರಿಗೀಗ 102 ವರ್ಷ ವಯಸ್ಸು. ತಮ್ಮ 80ನೇ ವಯಸ್ಸಿನ ತನಕ ಇವರು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು!

ಪ್ರಶಸ್ತಿ ನೀಡಿದ ಇಂಟರ್‌ನ್ಯಾಷನಲ್ ಪ್ರೈಜ್ ಇನ್ ಸ್ಟ್ಯಾಟಿಸ್ಟಿಕ್ಸ್ ಸಂಸ್ಥೆಯು, "75 ವರ್ಷಗಳ ಹಿಂದೆ ರಾವ್ ಮಾಡಿದ ಕೆಲಸವು ವಿಜ್ಞಾನದ ಮೇಲೆ ಆಳವಾದ ಪ್ರಭಾವವನ್ನು ಬೀರುತ್ತಿದೆ" ಎಂದು ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಪ್ರೋತ್ಸಾಹ ಧನದ ವಿವರ:

ವಾರ್ಷಿಕ ಪ್ರೋತ್ಸಾಹ ಧನ – 150/–

ಮೂರು ವರ್ಷಕ್ಕೆ – 400/–

ಐದು ವರ್ಷಕ್ಕೆ – 650/–

ಎಂ.ಒ/ಡಿಡಿ/ಚೆಕ್‌ಗಳನ್ನು 'Deenabandhu Teacher Resource Centre' ಹೆಸರಿಗೆ ಬರೆಯಿರಿ ಅಥವಾ

UPI ID : DEENABANDHUTEACHER@SBI ಮೂಲಕ ಪಾವತಿಸಬಹುದು

ಇವರಿಗೆ: